



ರವೀಂದ್ರನಾಥ್ ಟ್ಯಾಗೋರ್
ಚಿತ್ರಗಳು: ಸುನೈನಾ ಕೊಯೆಲ್ಹೋ

# ಮೋಡಗಳು ಮತ್ತು ಅಲೆಗಳು

ಇದು ಒಂದು ಪುಟ್ಟ ಮಗುವು ಹೇಗೆ ಸೊಗಸಾದ ಆಮಂತ್ರಣಗಳನ್ನು ನಿರಾಕರಿಸಿ , ಬದಲಿಗೆ ತನ್ನ ತಾಯಿಯೊಂದಿಗೆ ಆಟವಾಡುತ್ತಾ , ಅವಳ ಜೊತೆಲಿ ಆನಂದದಾಯಕವಾಗಿರುವ ಬಗ್ಗೆ ಪ್ರೀತಿಯ ಕವಿತೆ. ಇದು ಸಾರ್ವಕಾಲಿಕ ಶ್ರೇಷ್ಠ ಕವಿ ಅತ್ಯಂತ ಮೃದುತ್ವದಿಂದ ನೇಯ್ದ ಪದಗಳು, ಎಲ್ಲಾ ಚಿಕ್ಕ ಮಕ್ಕಳಿಗಾಗ ಒಂದು ಮುದ್ದಾದ ಪದ್ಯ.

KATHA

ಕಥಾ ಸಂಸ್ಥೆಯನ್ನು 1988 ರಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಮಕ್ಕಳ ಬಡತನದ ಸವಾಲುಗಳನ್ನು ನಿಭಾಯಿಸಲು ಸ್ಥಾಪಿಸಲಾಯಿತು. ಕಥಾ ಮೂರು ಪ್ರಭಾವದ ಕೇಂದ್ರಗಳನ್ನು ಹೊಂದಿದೆ - ಕಥೆ ಸಂಶೋಧನೆ ಮತ್ತು ಸಂಪನ್ಮೂಲ ಕೇಂದ್ರ (ಕಥಾ ವಿಲಾಸಂ), ಸುಸ್ಥಿರ ಕಲಿಕೆಯ ಕೇಂದ್ರ (ಕಲ್ಪವೃಕ್ಷಂ) ಮತ್ತು ಕಥಾ ಆದಿವಾಸಿ ಮತ್ತು ದಲಿತ ಲರ್ನಿಂಗ್ ಲ್ಯಾಬ್ (KADL) ನಾವೀನ್ಯತೆ ಕೇಂದ್ರ. ಕಥಾ ಅವರ 300 ಮಿಲಿಯನ್ ಸಿಟಿಜನ್ಸ್ ಚಾಲೆಂಜ್ ಈ ಮೂರು ಕೇಂದ್ರಗಳ ಬಲವನ್ನು ಸಹಯೋಗದೊಂದಿಗೆ, ಸಮರ್ಥನೀಯವಾಗಿ ಮತ್ತು ವಿಶ್ವದ ಅತಿದೊಡ್ಡ ಯುವ ಜನಸಂಖ್ಯೆಯ ಜೀವನದ ಮೇಲೆ ಪ್ರಭಾವ ಬೀರಲು ಸಂಯೋಜಿಸುತ್ತದೆ.

"ಇದು ಭಾರತದ ಕಿರೀಟದಲ್ಲಿ ಒಂದು ಶೈಕ್ಷಣಿಕ ಆಭರಣ." - ನೌಯುಕಿ ಶಿನೋಹರಾ, ಉಪ ವ್ಯವಸ್ಥಾಪಕ ನಿರ್ದೇಶಕ, ಅಂತಾರಾಷ್ಟ್ರೀಯ ಹಣಕಾಸು ನಿಧಿ

"[ಕಥಾ]...ಭಾರತೀಯ ಪ್ರಕಾಶನ ಇತಿಹಾಸದಲ್ಲಿ ಒಂದು ವಿಶೇಷ ಮತ್ತು ಅನನ್ಯ ಕ್ಷಣ." - ಎಕನಾಮಿಕ್ ಟೈಮ್ಸ್

“ಕಥಾ ಸಂಸ್ಥೆಯು ಮಕ್ಕಳಿಗಾಗಿ ನಿಜವಾದ ವಾತ್ಸಲ್ಯವನ್ನು ಹೊಂದಿದೆ. ಅದಕ್ಕಾಗಿಯೇ ... ಮಕ್ಕಳಿಗಾಗಿ ಅಂತಹ ಬಹುಕಾಂತೀಯ ಚಿತ್ರ ಪುಸ್ತಕಗಳನ್ನು ರಚಿಸಿದೆ. - ಟೈಮ್ ಔಟ್

"ಕಥಾ ಸಂಸ್ಥೆಯ ಕೆಲಸವು, ಮಕ್ಕಳು [ಅವರ ಪುಸ್ತಕಗಳಲ್ಲಿ] ಮಾಡುವಂತೆಯೇ ತಮ್ಮ ಸಮುದಾಯಗಳಿಗೆ ಸಮರ್ಥನೀಯ ಮತ್ತು ನೈಜವಾದ ಬದಲಾವಣೆಯನ್ನು ತರಬಹುದು ಎಂಬ ಉದ್ದೇಶದಿಂದ ನಡೆಸಲ್ಪಡುತ್ತದೆ." - ಪೇಪರ್ಟಿಗರ್ಸ್

# ಮೋಡಗಳು ಮತ್ತು ಅಲೆಗಳು



ರವೀಂದ್ರನಾಥ್ ಟ್ಯಾಗೋರ್

ಚಿತ್ರಗಳು: ಸುನೈನಾ ಕೊಯೆಲ್ಹೋ

KATHA

ದೆಹಲಿ | ಚೆನ್ನೈ | ಬೆಂಗಳೂರು



ಅಮ್ಮ,
ಮೋಡಗಳಲ್ಲಿ ವಾಸಿಸುವ ಜನ ನನ್ನನ್ನು
ಕರೆಯುತ್ತಾರೆ ...




ಬಾ!

ನಾವು ಎದ್ದಾಗಿನಿಂದ ದಿನ ಮುಗಿವವರೆಗೆ
ಆಡುತ್ತೇವೆ. ನಾವು ಬಂಗಾರದ ಬೆಳಗು ಮತ್ತು
ಬೆಳ್ಳಿ ಚಂದ್ರನೊಂದಿಗೆ ಆಡುತ್ತೇವೆ.

ನಾನು ಕೇಳುತ್ತೇನೆ,
ಆದರೆ ನಾನು ನಿಮ್ಮ ಬಳಿ ಬರುವುದು ಹೇಗೆ?



ಅವರು ಉತ್ತರಿಸುತ್ತಾರೆ,
ಭೂಮಿಯ ಅಂಚಿಗೆ ಬಾ , ನಿನ್ನ ಕೈಗಳನ್ನು
ಆಕಾಶಕ್ಕೆ ಮೇಲಕ್ಕೆತ್ತು , ನೀನು ಮೋಡದ
ಮೇಲೇರಿ ನಮ್ಮ ಬಳಿ ಬರುತ್ತೀಯಾ



ನಾನು ಹೇಳುತ್ತೇನೆ - "ನನ್ನ ಅಮ್ಮ ಮನೆಯಲ್ಲಿ ನನಗಾಗಿ ಕಾಯುತ್ತಿದ್ದಾಳೆ.  ಅವಳನ್ನು ಬಿಟ್ಟು ನಾನು ಬರುವುದಾದರೂ  ಹೇಗೆ?" ಆಗ ಅವರು ನಸು ನಗುತ್ತಾ  ತೇಲಿ ಹೋಗುತ್ತಾರೆ.




ಆದರೆ ಅದಕ್ಕಿಂತ ಒಳ್ಳೆಯ ಆಟ ನನಗೆ ಗೊತ್ತು, ಅಮ್ಮ. ನಾನು ಮೋಡವಾಗುತ್ತೇನೆ ಮತ್ತು ನೀನು ಚಂದ್ರನಾಗು.

ನಾನು ನಿನ್ನನ್ನು ನನ್ನ ಎರಡೂ ಕೈಗಳಿಂದ ಮುಚ್ಚುತ್ತೇನೆ ಮತ್ತು ನಮ್ಮ ಮನೆಯ ಛಾವಣಿಯೇ ನೀಲಿ ಆಕಾಶವಾಗುತ್ತದೆ.

ಅಲೆಗಳಲ್ಲಿ ವಾಸಿಸುವ ಜನರು ನನ್ನನ್ನು ಕರೆಯುತ್ತಾರೆ... "ಸೇರಿಕೋ! ನಾವು ಬೆಳಗಿನಿಂದ ರಾತ್ರಿಯವರೆಗೆ ಹಾಡುತ್ತೇವೆ; ಪ್ರಯಾಣಿಸುತ್ತಲೇ ಇರುತ್ತೇವೆ ಮತ್ತು ನಾವೆಲ್ಲಿಗೆ ಹೋಗುತ್ತೇವೆ ಎಂಬುದೇ ತಿಳಿದಿರುವುದಿಲ್ಲ





ನಾನು ಕೇಳುತ್ತೇನೆ,
ಆದರೆ ನಾನು ನಿಮ್ಮನ್ನು ಸೇರುವುದು ಹೇಗೆ?

ಅವರು ನನಗೆ ಹೇಳುತ್ತಾರೆ, "ಕಡಲ ತೀರದ ಅಂಚಿಗೆ
ಬಂದು ನಿನ್ನ ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿ ನಿಲ್ಲು,

ಆಗ ನೀನು  ಅಲೆಗಳ ಮೇಲೆ ತೇಲಿಬರುತ್ತಿಯ






ನಾನು ಹೇಳುತ್ತೇನೆ, "ನನ್ನ ತಾಯಿ ಯಾವಾಗಲೂ ನಾನು ಸಂಜೆ ಮನೆಯಲ್ಲಿ ಇರಬೇಕೆಂದು ಬಯಸುತ್ತಾಳೆ. ನಾನು ಅವಳನ್ನು ಬಿಟ್ಟು ಹೇಗೆ ಹೋಗಲಿ? "

ಅವರು ನಗುತ್ತಾರೆ, ನೃತ್ಯ ಮಾಡುತ್ತಾರೆ ಮತ್ತು ಸಾಗಿ ಹೋಗುತ್ತಾರೆ.

ಆದರೆ ಅದಕ್ಕಿಂತ ಉತ್ತಮವಾದ ಆಟ
ನನಗೆ ಗೊತ್ತು.



ನಾನು ಅಲೆಯಾಗುತ್ತೇನೆ ಮತ್ತು ನೀನು
ಅಪೂರ್ವ ಸಮುದ್ರ ತೀರವಾಗುತ್ತೀಯ.ನಾನು
ಉರುಳುತ್ತಾ ಸಂತಸದಿಂದ ನಗುತ್ತಾ ನಿನ್ನ
ಮಡಿಲಿಗೆ ಸೇರುತ್ತೇನೆ



ಮತ್ತು ನಾವಿಬ್ಬರೂ ಎಲ್ಲಿದ್ದೇವೆ
ಎಂದು ಜಗತ್ತಿನಲ್ಲಿ ಯಾರಿಗೂ
ತಿಳಿಯುವುದಿಲ್ಲ!

ರವೀಂದ್ರನಾಥ್ ಟ್ಯಾಗೋರರು ಕೋಲ್ಕಾತಾದಲ್ಲಿ ಮೇ 7, 1861ರಂದು ಜನಿಸಿದರು. ಅವರನ್ನು ಪ್ರೀತಿಯಿಂದ ಗುರುದೇವ ಎಂದು ಕರೆಯಲಾಗುತ್ತದೆ. ಅವರ ತಂದೆ ದೇವೇಂದ್ರನಾಥ್ ಟ್ಯಾಗೋರ್ ಸಂಸ್ಕೃತ ವಿದ್ವಾಂಸರು. ಗುರುದೇವರ ಆರಂಭಿಕ ಶಿಕ್ಷಣ ಮನೆಯಲ್ಲಿಯೇ ನಡೆಯಿತು. ಶಾಲೆಯಲ್ಲಿ, ಇತರರು ತಮ್ಮ ಪಾಠಗಳನ್ನು ಕಲಿಯುತ್ತಿದ್ದರೆ, ಗುರುದೇವ ಕನಸುಗಳ ರೋಚಕ ಜಗತ್ತಿಗೆ ಜಾರಿಕೊಳ್ಳುತ್ತಿದ್ದರು. ಏಳನೇ ವಯಸ್ಸಿನಲ್ಲಿ ಅವರು ತಮ್ಮ ಮೊದಲ ಕವಿತೆಯನ್ನು ಬರೆದರು. ಹದಿನೇಳನೇ ವಯಸ್ಸಿನಲ್ಲಿ, ಅವರ ಮೊದಲ ಕವನ ಸಂಕಲನ ಪ್ರಕಟವಾಯಿತು. ಭಾವಪೂರ್ಣವಾದ ಅವರ ಮಾಂತ್ರಿಕ ಬರವಣಿಗೆ, ಆಳವಾದ ಭಾವನೆಗಳನ್ನು ಮೂಡಿಸುತ್ತವೆ ಮತ್ತು ಅವರು ಪದಗಳನ್ನು ಸರಾಗವಾಗಿ ಹೆಣೆಯುವ ರೀತಿ ಅಚ್ಚರಿ ಮೂಡಿಸುತ್ತದೆ. ಅವರ ಪ್ರಸಿದ್ಧ ಕವನಗಳ ಸಂಕಲನ ಗೀತಾಂಜಲಿಗಾಗಿ ಅವರಿಗೆ 1913ರಲ್ಲಿ ಸಾಹಿತ್ಯದ ನೊಬೆಲ್ ಪ್ರಶಸ್ತಿ ನೀಡಲಾಯಿತು.

ಸುನೈನಾ ಕೊಯೆಲ್ಹೋ ಅವರು ಅಹ್ಮದಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್‌ನಲ್ಲಿ ಆನಿಮೇಷನ್ ಅಧ್ಯಯನ ಮಾಡಿದ್ದು ಈಗ ಮುಂಬಯಿನಲ್ಲಿ ವಾಸಿಸುತ್ತಿದ್ದಾರೆ. ಅವರು ದೂರದರ್ಶನಕ್ಕಾಗಿ ಅನಿಮೇಷನ್ ಮಾಡುತ್ತಾರೆ. ಚಿತ್ರ ಬಿಡಿಸದೆ ಇದ್ದಾಗ, ಮಲಗಿ ಕನಸು ಕಾಣುತ್ತಾರೆ, ಅಡುಗೆ ಮಾಡುತ್ತಾರೆ ಇಲ್ಲವೇ ಸಮುದ್ರ ತೀರದಲ್ಲಿ ಕುಳಿತು ಸಮುದ್ರ ಇನ್ನಷ್ಟು ಸ್ವಚ್ಛವಾಗಿದ್ದರೆ ಈಜಬಹುದಿತ್ತು ಎಂದುಕೊಳ್ಳುತ್ತಿರುತ್ತಾರೆ.

KATHA

ಈ ಆವೃತ್ತಿಯನ್ನು ಮೊದಲು 2024
ಕಾಪಿರೈಟ್ © ಕಥಾ, 2024
ಪಠ್ಯದ ಕಾಪಿರೈಟ್ © ರವೀಂದ್ರನಾಥ ಟ್ಯಾಗೋರ್
ವಿವರಣೆ ಹಕ್ಕುಸ್ವಾಮ್ಯ © ಕಥಾ
ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಈ ಪುಸ್ತಕದ ಯಾವುದೇ ಭಾಗವನ್ನು ಪ್ರಕಾಶಕರ ಪೂರ್ವ ಲಿಖಿತ ಅನುಮತಿಯಿಲ್ಲದೆ ಯಾವುದೇ ರೂಪದಲ್ಲಿ ಮರು ಬಳಕೆ ಮಾಡುವಂತಿಲ್ಲ ಅಥವಾ ಬಳಸುವಂತಿಲ್ಲ.
ನವದೆಹಲಿಯಲ್ಲಿ ಮುದ್ರಿಸಲಾಗಿದೆ
ಐಎಸ್ ಬಿಎನ್ 978-93-94185-79-1

ನಮ್ಮ ಧ್ಯೇಯ: ಪ್ರತಿಯೊಂದು ಮಗುವೂ ಖುಷಿಗಾಗಿ ಮತ್ತು ಅರ್ಥಕ್ಕಾಗಿ ಓದಬೇಕು!
ಕಥಾ ಎಂಬುದು ಒಂದು ನೋಂದಾಯಿತ ಲಾಭ ರಹಿತ ಸಂಸ್ಥೆ. ಈ ಪುಸ್ತಕವು 300 ಮಿಲಿಯನ್ ಸಿಟಿಜನ್ಸ್ ಚಾಲೆಂಜ್‌ನ ಕೃತಿಯಾಗಿದೆ.
ಭಾರತದಲ್ಲಿ 300 ಮಿಲಿಯನ್ ಶಾಲೆಗೆ ಹೋಗುವ ಮಕ್ಕಳು ಹೊಸ ಕಲಿಕೆಯ ವಿಧಾನಗಳೊಂದಿಗೆ ಗ್ರೇಡ್ ಮಟ್ಟದ ಓದುವಿಕೆಯನ್ನು ಸಾಧಿಸಲು ನಾವು ಸಹಾಯ ಮಾಡುತ್ತೇವೆ.
ದೆಹಲಿ ವಿಳಾಸ: A3, ಸರ್ವೋದಯ ಎನ್ಕ್ಲೇವ್, ಶ್ರೀ ಅರಬಿಂದೋ ಮಾರ್ಗ, ನವದೆಹಲಿ 110 017
ಚೆನ್ನೈ ವಿಳಾಸ: 6, ಪಾಪನಾಸಂ ಶಿವನ್ ಸಲೈ, ಮೈಲಾಪುರ, ಚೆನ್ನೈ 600 004
ದೂರವಾಣಿ: ದೆಹಲಿ: +91 11 4182 9998 | ಚೆನ್ನೈ: +91 98400 30073
ಇಮೇಲ್: books@katha.org
ವೆಬ್‌ಸೈಟ್: www.katha.org | books.katha.org | learn.katha.org

ಈ ಪುಸ್ತಕದಿಂದ ಬರುವ ಲಾಭವು ಕಥಾ ಶಾಲೆಗಳಲ್ಲಿ ಕಲಿಯುವ ಮಕ್ಕಳ ಗುಣಮಟ್ಟದ ಶಿಕ್ಷಣವನ್ನು ಬೆಂಬಲಿಸುತ್ತದೆ.
ನಮ್ಮ ಪುಸ್ತಕಗಳನ್ನು ಮುದ್ರಿಸಿದ ಕಾಗದವನ್ನು ತಯಾರಿಸಲು ಬಳಸುವ ಮರವನ್ನು ಬದಲಿಸಲು ಕಥಾ ನಿಯಮಿತವಾಗಿ ಮರಗಳನ್ನು ನೆಡುತ್ತದೆ










ಈ ವಿಶಿಷ್ಟ ಸರಣಿ ಮೊದಲ ತಲೆಮಾರಿನ ಓದುಗರನ್ನು ಮನರಂಜನೆ ಮತ್ತು ಅರ್ಥಪೂರ್ಣ ಓದಿನ ಲೋಕಕ್ಕೆ ಸೆಳೆಯುತ್ತದೆ. ಈ ಸರಣಿಯ ಪುಸ್ತಕಗಳು, ತಮ್ಮ ಉನ್ನತ ಗುಣಮಟ್ಟದ ವಿಷಯವಸ್ತು, ಮತ್ತು ವಿನ್ಯಾಸವು ಈ ಮಕ್ಕಳ ಕಲಿಕೆ ಅವಶ್ಯಕತೆಗಳಿಗೆ ತಕ್ಕಂತೆ ಇದೆ . ಹಂಚಿಕೊಂಡ ಮತ್ತುಮಾರ್ಗದರ್ಶಿತ ಓದುವಿಕೆಯ ಮೂಲಕ ಭಾರತದ 2000 ವರ್ಷಗಳ ಸಾಹಿತ್ಯ ಪರಂಪರೆಯನ್ನು, ಶ್ರೇಷ್ಠತೆಯಿಂದ ಆಧುನಿಕತೆಯವರೆಗೆ ಕಥಾ ಒದಗಿಸುತ್ತದೆ. ಇದರೊಂದಿಗೆ, ಕೈಗೆಟುಕುವ ಬೆಲೆಯಲ್ಲಿ ತಲುಪದ ಮಗುವನ್ನು ತಲುಪಲು - ಓದುವಿಕೆ ಮತ್ತು ಶಿಕ್ಷಣವನ್ನು ಪ್ರಜಾಪ್ರಭುತ್ವಗೊಳಿಸುವ ಕಥಾ ಮಾರ್ಗ!


ಈ ಎಲ್ಲ ಐಎಲ್‌ಆರ್ ಪುಸ್ತಕಗಳನ್ನು


ಸಂತೋಷ ಮತ್ತು ಅಚ್ಚರಿಗಾಗಿ ಓದಿ




























FOR OUR BOOKS

www.books.katha.org

www.books.katha.org

ಮಕ್ಕಳಿಗಾಗಿ
ಒಂದು ಕಥಾ ಪುಸ್ತಕ
ISBN 978-93-94185-79-1
9 789394 185791
₹ 145/-
books.katha.org

ಆನಂದಿಸಿ ಓದಿ

ಕಥಾದಿಂದ ಒಂದು 300ಎಂ ಥಿಂಕ್‌ಬುಕ್